ಕಥೆ



ವಿನಾಯಕ ಅರಳಸುರಳಿ

ಕಲೆ: ಸಂತೋಷ್ ಸಸಿಹಿತ್ಲು

# ರಸ್ತೆಗೆ ತೊಡಿಸಿದ ದಣಪೆ



‘ಜೀತು ಬೈಂದ ಮನಿಗೆ’ ಅಮ್ಮ ಹಾಗೆಂದಾಗ ಋತುರಾಜನ ಬೀಪಿ ತುಂಗಾ ನದಿಯ ಪ್ರವಾಹದಂತೆ ಉಕ್ಕಿತು. ‘ಬರ್ಲಿ, ಅವನ ಸೊಂಟ ತಿಪ್ಪಿ ಕಳಿಸ್ತೆ’ ಎಂದವನು ಕಡಿಯುತ್ತಿದ್ದ ಕಟ್ಟಿಗೆಗೆ ದುಪ್ಪಟ್ಟು ವೇಗದಲ್ಲಿ ಏಟು ಕೊಟ್ಟ. ಸಾಧಾರಣವಾಗಿ ನಾಲ್ಕೇಟಿಗೆ ಮುರಿಯಬೇಕಿದ್ದ, ಆದರೀಗ ಎರಡೇ ಏಟಿಗೆ ಲಟಾರನೆ ಹೋಳಾದ ಕಟ್ಟಿಗೆಯಲ್ಲಿ ಅವನಿಗೆ ತನ್ನ ಕೈಯಲ್ಲಿ ಮುರಿಯಲ್ಪಡಲಿರುವ ಜೀತುವಿನ ಮೂಳೆಯೇ ಕಾಣಿಸಿತು.

ಪಕ್ಕದ ಮನೆಯ ರಾಚಯ್ಯ ಮೇಷ್ಟ್ರು ತೋಟಕ್ಕೆ ಹೋಗುವ ದಾರಿಗೆ ಋತುರಾಜ, ದಣಪೆ ಜಡಿದು ಆಗಲೇ ತಿಂಗಳಾಗುತ್ತಾ ಬಂದಿತ್ತು. ‘ರಸ್ತೆಗ್ಯಾರಾದ್ರೂ ಉಣಗೋಲು ಇಡ್ತಾರೇನೋ? ಕನಿಷ್ಠ ಒಂದು ಆಪಿ ಓಡಾಡುವಷ್ಟು ದಾರಿಯಾದ್ರೂ ಬಿಡೋ’ ಎಂದು ಬಾಗಿಲಿಗೆ ಬಂದು ಕೇಳಿದ ಮೇಷ್ಟರಿಗೆ ‘ಬೋಳೀಮಗ್ನೇ, ಮೊದ್ಲು ನಮ್ಮನೆ ಅಂಗ್ಳದಿಂದ ಹೊರಗೆ ನಿಂತು ಮಾತಾಡ. ನನ್ ಜಾಗಕ್ಕೆ ನಾ ಬೇಲೀನಾರೂ ಹಾಕ್ತೆ, ಬೀಗನಾರೂ ಹಾಕ್ತೆ. ಕೇಳುಕೆ ನೀ ಯಾವೂರ್ ನಾಯೀನ?’ ಎಂದು ತಟ್ಟಿರಾಯ ಮೈಮೇಲೆ ಬಂದಂತೆ ಅಬ್ಬರಿಸಿದ್ದ. ಆಗಷ್ಟೇ